ಪ್ರಜಾವಾಣಿ

ಅಖಿಲ ಭಾರತ ಅಂತರ ವಿ.ವಿ.ಈಜು ಚಾಂಪಿಯನ್‌ಷಿಪ್: ಮಿಂಚಿದ ಮೀನಾಕ್ಷಿ

# ಅರವಿಂದ್‌ಗೆ ಬಂಗಾರದ ಪದಕ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಮಿಂಚಿನ ಪ್ರದರ್ಶನ ನೀಡಿದ ಬೆಳಗಾವಿಯ ವಿಟಿಯುನ ಎಂ.ಅರವಿಂದ್ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಮೊದಲೆರಡು ದಿನದ ಸ್ಪರ್ಧೆಯಲ್ಲಿ ಮಿಂಚಿದ್ದ ಜೈನ್ ವಿಶ್ವವಿದ್ಯಾಲಯದ ವಿ.ಕೆ.ಆರ್. ಮೀನಾಕ್ಷಿ ಮಹಿಳೆಯರ ವಿಭಾಗದಲ್ಲಿ ಮತ್ತೆರಡು ಸ್ವರ್ಣಕ್ಕೆ ಕೊರಳೊಡ್ಡಿದರು.

ಜೈನ್ ವಿ.ವಿ. ಕ್ಯಾಂಪಸ್‌ನ ಈಜುಗೊಳದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಮಂಗಳವಾರ ಪುರುಷರ 50 ಮೀ. ಬ್ಯಾಕ್ ಸ್ಟ್ರೋಕ್‌ನಲ್ಲಿ ಅರವಿಂದ್ 27.90 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಈ ಸಾಧನೆ ಮಾಡಿದರು.

ಅಣ್ಣಾ ವಿ.ವಿ.ಯ ಎಸ್. ಶ್ರೇಯಸ್ (28.97ಸೆ) ಬೆಳ್ಳಿ ಗೆದ್ದರೆ, ಜೈನ್ ವಿ.ವಿ.ಯ ರಕ್ಷಿತ್ ಶೆಟ್ಟಿ ಮತ್ತು ಡಿ.ವೈ ಪಾಟೀಲ್ ವಿ.ವಿ.ಯ ಸಚಿತ್ ಎಂಜಿನಿಯರ್ 29.39ಸೆಕೆಂಡುಗಳಲ್ಲಿ ಗುರಿ ಸೇರಿ ಜಂಟಿಯಾಗಿ ರಜತ ಪದಕ ಪಡೆದುಕೊಂಡರು.



ಬೆಂಗಳೂರಿನಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿ.ವಿ ಈಜು ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಗುರುನಾನಕ್ ದೇವ್ ವಿಶ್ವವಿದ್ಯಾಲಯದ ಅಮನ್ ಘಾಯ್ 100 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಚಿನ್ನ ಗೆದ್ದಾಗ ಸಂಭ್ರಮಿಸಿದ ಕ್ಷಣ –ಪ್ರಜಾವಾಣಿ ಚಿತ್ರ

ಮಂಗಳವಾರದ ಫಲಿತಾಂಶ: ಪುರುಷರ ವಿಭಾಗ: 50 ಮೀ.ಬ್ಯಾಕ್ ಸ್ಟ್ರೋಕ್: ಎಂ.ಅರವಿಂದ್ (ವಿಟಿಯು, ಕಾಲ: 27.90ಸೆ)–1, ಎಸ್.ಶ್ರೇಯಸ್ (ಅಣ್ಣಾ ವಿ.ವಿ, ಕಾಲ: 28.97ಸೆ)–2, ರಕ್ಷಿತ್ ಶೆಟ್ಟಿ (ಜೈನ್ ವಿ.ವಿ) ಮತ್ತು ಸಚಿತ್ ಎಂಜಿನಿಯರ್ (ಡಿ.ವೈ.ಪಾಟೀಲ್ ವಿ.ವಿ: ಕಾಲ: 29.39ಸೆ)–3.

100ಮೀ. ಫ್ರೀಸ್ಟೈಲ್: ಅಮನ್ ಘಾಯ್ (ಗುರುನಾನಕ್ ದೇವ್ ವಿ.ವಿ, 57.37ಸೆ)–1, ಬಾಬಿ ರಾಣಾ (ದೆಹಲಿ ವಿ.ವಿ, 58.79ಸೆ)–2, ಕರಣ್ ಬ್ರಾರ್ (ಪುಣೆ ವಿ.ವಿ, 59.17ಸೆ)–3.

400ಮೀ. ಫ್ರೀಸ್ಟೈಲ್: ಸೌರಭ್ ಸಾಂಗ್ವೇಕರ್ (ಎಂ.ಯು.ಎನ್, 4:04.59ಸೆ)–1, ಸಂಜಯ್ ರಾಜ್ (ವಿ.ಎನ್.ಎಸ್.ಜಿ, 4:18.09ಸೆ)–2, ಯೋಗೇಶ್ ಕುಮಾರ್ (ಎಂ.ಎ.ಎಸ್, 4:21.63ಸೆ)–3.

4X200 ಮೀ. ಫ್ರೀಸ್ಟೈಲ್ ರಿಲೇ: ವಿಟಿಯು, ಬೆಳಗಾವಿ (8:44.23ಸೆ)–1, ಕೇರಳ ವಿ.ವಿ (8:51.84ಸೆ)–2, ಪಂಜಾಬ್ ವಿ.ವಿ (8:52.86ಸೆ)–3.

ಡೈವಿಂಗ್: 3ಮೀ.ಸ್ಪ್ರಿಂಗ್ ಬೋರ್ಡ್: ಬಿ.ಅಜಯ್ (ಬಿ.ಎಚ್.ಎ, 243.40)–1, ಗೌರವ್ ರಘುವಂಶಿ (ಡಿ.ಎ.ವಿ.ವಿ, 222.75)–2, ಅತಾರು ಅಗರವಾಲ್ (ಆರ್.ಜಿ.ಪಿ.ವಿ, 208.95)–3.

ಮಹಿಳೆಯರ ವಿಭಾಗ: 50ಮೀ. ಬ್ಯಾಕ್‌ಸ್ಟ್ರೋಕ್: ವಿ.ಕೆ.ಆರ್. ಮೀನಾಕ್ಷಿ (ಜೈನ್.ವಿ.ವಿ, 31.66ಸೆ)–1, ರಾವ್ರುಫ್ ಗುಲ್‌ನಾಜ್ (ಎಂ.ಎ.ಎಸ್, 33.81ಸೆ)–2, ಅನನ್ಯಾ ಪಣಿಗ್ರಾಹಿ (ಎಂ.ಯು.ಎಚ್.ಎಸ್.ಸಿ, 34.46ಸೆ)–3.

100ಮೀ. ಫ್ರೀಸ್ಟೈಲ್: ವಿ.ಕೆ.ಆರ್.ಮೀನಾಕ್ಷಿ (ಜೈನ್ ವಿ.ವಿ, 1:06.32ಸೆ)–1, ದಿವ್ಯಾ ಸತಿಜ (ದೆಹಲಿ ವಿ.ವಿ, 1:09.18ಸೆ)–2, ಟಿ.ಸ್ನೇಹಾ (ಆರ್.ಜಿ.ಯು.ಎಚ್.ಎಸ್, 1:10.04ಸೆ)–3. 400ಮೀ. ಫ್ರೀಸ್ಟೈಲ್: ಟಿ.ಸ್ನೇಹಾ (ಆರ್.ಜಿ.ಯು.ಎಚ್.ಎಸ್, 4:48.97ಸೆ)–1, ಪ್ರತಿಮಾ ಕೊಲ್ಲಾಳಿ (ಬೆಂಗಳೂರು ವಿ.ವಿ, 4:51.34ಸೆ)–2, ಪೂರ್ವಾ ಶೆಟ್ಯೆ (ಜೈನ್ ವಿ.ವಿ, 4:52.10ಸೆ)–3.